ಪ್ರ.73
47

**ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ. ಮರಿತಿಬ್ಬೇಗೌಡರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ–**

ಪ್ರಶ್ನೆ:– **"ಮಂಡ್ಯ ಪಶ್ಚಿಮ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೊಕದ್ದಮೆ ಸಂಖ್ಯೆ: 64/2019 ರಲ್ಲಿ ಪ್ರಕರಣವು ದಾಖಲಾಗಿ ಆರೋಪ ಸಾಬೀತಾಗಿ ಒಂದೂವರೆ ವರ್ಷಗಳು ಕಳೆದಿದ್ದರೂ ದಿನಾಂಕ: 20.12.2019 ರಂದು ಅಂತಿಮ ತನಿಖಾ ವರದಿಯನ್ನು ಸಿದ್ಧಪಡಿಸಿದ್ದರೂ ಸಹ ಅಂತಿಮ ತನಿಖಾ ವರದಿ ಸಲ್ಲಿಸಿರುವುದಿಲ್ಲ. ಸದರಿ ಪ್ರಕರಣವು ಐ.ಪಿ.ಸಿ ಅಡಿಯಲ್ಲಿ ಗಂಭೀರ ಪ್ರಕರಣವಾಗಿರುವುದರಿಂದ ಇಲಾಖೆಯ ಅಭಿಯೋಜನಾ ಮಂಜೂರಾತಿ ಅವಶ್ಯಕತೆ ಇರುವುದಿಲ್ಲ. ಆದರೂ ಸಹ ಅಭಿಯೋಜನಾ ಮಂಜೂರಾತಿಗಾಗಿ ಸಂಬಂಧಪಟ್ಟ ಇಲಾಖೆಗೆ ಹಲವು ಬಾರಿ ಮನವಿ ಸಲ್ಲಿಸಿ ಇದುವರೆವಿಗೂ ಮಂಜೂರಾತಿ ನೀಡಿಲ್ಲವೆಂದು ನೆಪದಿಂದ ನ್ಯಾಯಾಲಯಕ್ಕೆ ಅಂತಿಮ ತನಿಖಾ ವರದಿ ಸಲ್ಲಿಸದೇ ವಿನಾಕಾರಣ ಪ್ರಕರಣವು ವಿಳಂಬಗೊಳಿಸಲಾಗುತ್ತಿದೆ. ಕೂಡಲೇ ಗೃಹ ಇಲಾಖೆಯು ತನಿಖೆಯಲ್ಲಿ ಆರೋಪ ಸಾಬೀತಾಗಿರುವುದರಿಂದ ಅಭಿಯೋಜನಾ ಮಂಜೂರಾತಿ ಅವಶ್ಯಕತೆ ಹಾಗೂ ವಿಳಂಬದ ನೆಪದ ಕುರಿತು ಕಾನೂನಿನ ರೀತ್ಯಾ ಮುಂದಿನ ಸೂಕ್ತ ಕ್ರಮ ಕೈಗೊಂಡು ಅಂತಿಮ ತನಿಖಾ ವರದಿ ಸಲ್ಲಿಸಿ ನ್ಯಾಯ ಒದಗಿಸುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯ ಬಯಸುತ್ತೇನೆ"**

ಉತ್ತರ:– ಶ್ರೀಮತಿ. ಲತಾ. ಅಸಿಸ್ಟೆಂಟ್ ಕಮೀಷನರ್, ಮಂಡ್ಯ ರವರು ದಿನಾಂಕ 27/04/2019 ರಂದು ಮಂಡ್ಯ ಪಶ್ಚಿಮ ಪೋಲೀಸ್ ಠಾಣೆಗೆ ಹಾಜರಾಗಿ, ಶ್ರೀಮತಿ. ಸುಷ್ಮಾ ಅಬಕಾರಿ ನಿರೀಕ್ಷಕರು, ಮಳವಳ್ಳಿ ರವರ ವಿರುದ್ಧ ವಂಚನೆ, ಕಳವು ಮತ್ತು ಪ್ರಾಣ ಬೆದರಿಕೆ ಹಾಕಿರುವ ಕುರಿತು ನೀಡಿದ ದೂರಿನ ಮೇರೆಗೆ ಪಶ್ಚಿಮ ಠಾಣೆ ಮೊ.ಸಂ. 64/2019 ಕಲಂ: 379, 420, 506 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಪ್ರಕರಣಕ್ಕೆ ಸಂಬಂದಿಸಿದಂತೆ ಪ್ರಗತಿ ಪರ ಪರಿಶೀಲನೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಾದ ಶ್ರೀ. ಟಿ.ಎಂ. ಶ್ರೀನಿವಾಸ ಮೂರ್ತಿ, ಶ್ರೀಮತಿ. ಎಂ.ಆರ್.ಮಮತ, ಶ್ರೀಮತಿ.ಪಿ.ಪ್ರೇಮ, ಶ್ರೀಮತಿ.ಎಸ್.ಎಂ.ಶೈಲಜಾ, ಶ್ರೀ.ಎನ್.ರಾಜೇಶ್ & ಶ್ರೀ. ಎಸ್.ಎನ್. ಪ್ರೇಮ ಕುಮಾರ್, ಶ್ರೀ. ವೈ.ಭರತೇಶ್, & ಶ್ರೀ. ಡಿ.ವಿ. ದಿನಕರ್ ರವರುಗಳನ್ನು ವಿಚಾರಣೆ ಮಾಡಲಾಗಿರುತ್ತದೆ. ಈ ಪ್ರಕರಣದ ತನಿಖೆಯಿಂದ & ಸಾಕ್ಷ್ಯಾಧಾರಗಳಿಂದ ಆರೋಪಿ ಕೆ.ಸುಷ್ಮಾರವರ ವಿರುದ್ಧ ಐಪಿಸಿ ಕಲಂ: 380, 506 ರನ್ವಯ ಆರೋಪ ಸಾಬೀತಾಗಿರುವುದರಿಂದ ದಿನಾಂಕ 20/12/2019 ರಂದು ಆರೋಪಣಾ ಪತ್ರವನ್ನು ತಯಾರಿಸಿ ದಿನಾಂಕ: 20/01/2020 ರಂದು ಸಹಾಯಕ ಸರ್ಕಾರಿ ಅಭಿಯೋಜಕರು, ಮಂಡ್ಯರವರಿಗೆ ಸಲ್ಲಿಸಿಕೊಂಡಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಪರಿಶೀಲನೆ ಮಾಡಿ, ಕೆಲವು ಸೂಚನೆಗಳೊಂದಿಗೆ ಮೇಲಾಧಿಕಾರಿಗಳ ಮುಖಾಂತರವಾಗಿ ಸಲ್ಲಿಸುವಂತೆ ದೋಷರೋಪಣೆ ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ದಿನಾಂಕ 23/05/2020 ರಂದು ಅಬಕಾರಿ ಆಯುಕ್ತರು ಶಾಂತಿನಗರ, ಬೆಂಗಳೂರು ರವರಿಗೆ ಆರೋಪಿ–01, ಕೆ.ಸುಷ್ಮಾ, ಹಾಲಿ ಅಬಕಾರಿ ನಿರೀಕ್ಷಕರು, ಜಯನಗರ, ವಲಯ ಬೆಂಗಳೂರು ಸಿಟಿ. [ಈ ಹಿಂದೆ ಮಳವಳ್ಳಿ ಉಪ–ವಿಭಾಗ, ಮಂಡ್ಯ ಜಿಲ್ಲೆ.] ರವರನ್ನು ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡುವಂತೆ ಕೋರಿ ಪತ್ರ ವ್ಯವಹಾರ ಮಾಡಲಾಗಿರುತ್ತದೆ. ಈ ಬಗ್ಗೆ ಯಾವುದೇ ವರದಿ ಬಾರದ ಕಾರಣ ದಿನಾಂಕ: 17/07/2020 ರಂದು ಸದರಿಯವರಿಗೆ ಮರು ಮನವಿಯನ್ನು ರಿಜಿಸ್ಟರ್ ಅಂಚೆ ಮುಖಾಂತರವಾಗಿ ರವಾನಿಸಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ತನಿಖೆಯು ಪೂರ್ಣಗೊಂಡಿದ್ದು, ಅಬಕಾರಿ ಆಯುಕ್ತರು ಶಾಂತಿನಗರ, ಬೆಂಗಳೂರು ರವರಿಂದ ಅಭಿಯೋಜನಾ ಮಂಜೂರಾತಿ ಕುರಿತು ಅನುಮತಿ ವರದಿ ಬರುವುದು ಬಾಕಿ ಇರುವುದರಿಂದ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿಯನ್ನು

ಸಲ್ಲಿಸಲಾಗಿರುವುದಿಲ್ಲ. ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಾಯಕ ಸರ್ಕಾರಿ ಅಭಿಯೋಜಕರನ್ನು ಖುದ್ದು ಭೇಟಿ ಮಾಡಿ ಪ್ರಕರಣದ ಬಗ್ಗೆ ಚರ್ಚಿಸಿ ಘನ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲು ತನಿಖಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

ಸದರಿ ಪ್ರಕರಣದ ತನಿಖೆಯಲ್ಲಿ ಯಾವುದೇ ವಿಳಂಬ ಧೋರಣೆಯನ್ನು ತೋರದೆ ತನಿಖೆಯನ್ನು ಸಮರ್ಪಕವಾಗಿ ನಡೆಸಿ, ಸಾಕ್ಷಿಗಳನ್ನು ಸಂಗ್ರಹಿಸಿ ದೋಷಾರೋಪಣೆ ಪಟ್ಟಿಯನ್ನು ಸಿದ್ಧಪಡಿಸಿದ್ದು, ಅಭಿಯೋಜನೆ ಮಂಜೂರಾತಿ ಬಂದ ಕೂಡಲೇ ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಲು ಕ್ರಮ ವಹಿಸಲಾಗುವುದು.

ಕಡತ ಸಂಖ್ಯೆ:ಎಚ್ ಡಿ 24 ಪಿಸಿಕ್ಯೂ 2020.

(ಬಸವರಾಜ ಬೊಮ್ಮಾಯಿ)
ಮಾನ್ಯ ಗೃಹ ಸಚಿವರು